ಯುವವೇದಿಕೆ

# ಆತ್ಮಶಿಕ್ಷಣ !

ಸ್ವಾಮಿ ಪುರುಷೋತ್ತಮಾನಂದ

**ಎಂಥಾ ಸುಶಿಕ್ಷಣವಿದ್ದರೂ ಸ್ವಶಿಕ್ಷಣವಿಲ್ಲದಿದ್ದರೆ ಸುಶಿಕ್ಷಿತರಿಗಿಂತ ಕುಶಿಕ್ಷಿತರ ಪ್ರಾಬಲ್ಯವೇ ಅಧಿಕವಾಗುತ್ತದೆಂಬುದು ಪೂಜ್ಯ ಸ್ವಾಮಿ ಪುರುಷೋತ್ತಮಾನಂದಜಿಯವರ ಅಭಿಪ್ರಾಯ. ಹಲವಾರು ಕೃತಿಗಳನ್ನು ರಚಿಸಿರುವ ಪೂಜ್ಯ ಸ್ವಾಮೀಜಿಯವರು ಬೆಳಗಾಂ ರಾಮಕೃಷ್ಣ ಮಿಷನ್ ಆಶ್ರಮದ ಅಧ್ಯಕ್ಷರಾಗಿರುವರು.**

## ಆತ್ಮಶಿಕ್ಷಣ ! ಹಾಗೆಂದರೇನು?

ತನಗೆ ತಾನು ಶಿಕ್ಷಣ ಕೊಟ್ಟುಕೊಳ್ಳುವುದೇ ಆತ್ಮಶಿಕ್ಷಣ! ಮಾನವಸಮಾಜದಲ್ಲಿ ಏಳಿಗೆ ಹೊಂದುತ್ತಿರುವ ಪ್ರತಿಯೊಬ್ಬರಲ್ಲಿಯೂ ತಿಳಿದೊ ತಿಳಿಯದೆಯೊ ನಡೆಯುತ್ತಲೇ ಇರುತ್ತದೆ ಈ ಕಾರ್ಯ—ಆತ್ಮಶಿಕ್ಷಣ! ಆದರೂ ಅತ್ಯಂತ ಅಪರೂಪದ ಶಬ್ದವಿದು—ಆತ್ಮಶಿಕ್ಷಣ! ಇಂದು ಸಮಸ್ತ ಜಗತ್ತಿನ ವಿದ್ಯಮಾನದತ್ತ ಹಾಗೂ ಮಾನವನು ಇಳಿಯುತ್ತಿರುವ ದುಃಸ್ಥಿತಿಯತ್ತ ಗಮನವಿತ್ತಾಗ ಈ ಅಪರೂಪದ ಆತ್ಮಶಿಕ್ಷಣವೆಂಬ ಅಮೋಘ ವಿಚಾರವನ್ನು ಜನಜನಿತಗೊಳಿಸಬೇಕಾದ ಆವಶ್ಯಕತೆ ಎದ್ದು ಕಾಣುತ್ತದೆ. ಗುರುಹಿರಿಯರಿಂದ, ಸದ್ಗ್ರಂಥಗಳಿಂದ, ಪ್ರಾಜ್ಞರಿಂದ ಪಡೆದ ಜ್ಞಾನವನ್ನು ತಿಳಿವಳಿಕೆಯನ್ನು ಮಾನವನು ಆತ್ಮಶಿಕ್ಷಣಕ್ಕಾಗಿ ಅಳವಡಿಸಿಕೊಳ್ಳದಿದ್ದರೆ ಅವನು ವಿದ್ಯಾರ್ಥಿದೆಸೆಯಲ್ಲಿ ಶಿಕ್ಷಣಕ್ಕಾಗಿ ವ್ಯಯಿಸಿದ ಕಾಲ ವ್ಯರ್ಥವೆಂದೇ ಅರ್ಥ.

ಆತ್ಮಶಿಕ್ಷಣದ ಮೂಲಕ ಆತ್ಮ ಸಂಯಮವನ್ನು ಸಿದ್ಧಿಸಿಕೊಂಡು ನಡೆ-ನುಡಿಗಳಲ್ಲಿ ಶೀಲ ಸೌರಭವನ್ನು ಸೂಸದಿರುವ ವ್ಯಕ್ತಿಯೊಬ್ಬ ಎಂತಹ ಶ್ರೇಷ್ಠ ಗ್ರಂಥಗಳನ್ನು ಆಳವಾಗಿ ಅಧ್ಯಯನ ಮಾಡಿ ವಿಶದವಾಗಿ ಅರಿತು ಆ ಕುರಿತು ನಿರರ್ಗಳವಾಗಿ ಉಪನ್ಯಾಸ ಮಾಡಬಲ್ಲವನಾದರೂ ಅವನೊಬ್ಬ ಮಾತನಾಡುವ ಪುಸ್ತಕವೇ ಹೊರತು ಹೆಚ್ಚೇನಲ್ಲ!

---

**ಎರಡು ಬಗೆಯ ಶಿಕ್ಷಣಗಳಿವೆ :**
**ಒಂದು ಇತರರಿಂದ ಪಡೆದದ್ದು,**
**ಇನ್ನೊಂದು ಹೆಚ್ಚು ಮುಖ್ಯವಾದದ್ದು,**
**ತನಗೆ ತಾನೇ ಕೊಟ್ಟುಕೊಂಡದ್ದು.**

ಗಿಬ್ಬನ್(Gibbon)

---

ಆತ್ಮಶಿಕ್ಷಣ! ಹಾಗೆಂದರೇನು? ತನಗೆ ತಾನೇ ಕೊಟ್ಟುಕೊಳ್ಳುವ ಶಿಕ್ಷಣ! ಸ್ವತಂತ್ರವಾಗಿ ತನ್ನನ್ನು ತಾನೇ ತಿದ್ದಿಕೊಳ್ಳುವ ತಂತ್ರ! ಸದ್ಗ್ರಂಥಗಳಿಂದ ಮಾರ್ಗದರ್ಶನ ದೊರೆತರೂ ಗುರುಹಿರಿಯರ ದಿಗ್ದರ್ಶನವಿದ್ದರೂ ಪರಿಸರದ ಪ್ರಭಾವದಿಂದ ತಂತಮ್ಮ ಮನದಲ್ಲೇಳುವ ಕಾಮ-ಕ್ರೋಧ-ಲೋಭ-ಮೋಹಾದಿಗಳನ್ನು ನಿಗ್ರಹಿಸಲು ತಾವು ತಾವೇ ಯತ್ನಿಸಬೇಕಾಗುತ್ತದೆ! ಇದೇ ಆತ್ಮಶಿಕ್ಷಣ. ಮಿತಾಹಾರದ ಮಹತ್ವವನ್ನು ಎಷ್ಟೇ ತಿಳಿದಿದ್ದರೂ ಮದುವೆಮನೆಯಲ್ಲೋ ಸಂತೋಷ ಕೂಟದಲ್ಲೋ ಭೋಜನವೇಳೆಯಲ್ಲಿ ಜಿಹ್ವಾಚಾಪಲ್ಯಕ್ಕೆ ಒಳಗಾಗದಿರುವಂತೆ ತಂತಮ್ಮ ನಾಲಗೆಯನ್ನು ತಾವು ತಾವೆ ಹತೋಟಿಯಲ್ಲಿಟ್ಟಿರಬೇಕಾಗುತ್ತದೆ! ಇದೇ ಆತ್ಮಶಿಕ್ಷಣ.

## ಆತ್ಮಶಿಕ್ಷಣದ ವ್ಯಾಪ್ತಿ

ಶಿಕ್ಷಣ ದೊರೆಯುವ ತಾಣ ಶಾಲಾ-ಕಾಲೇಜುಗಳೆಂಬುದು ನಿಜವಾದರೂ ಇಂದು ಬೃಹತ್ ಪ್ರಮಾಣದಲ್ಲಿ ಬೆಳೆದಿರುವ ನಾಗರಿಕತೆ ಹಾಗೂ ನಮ್ಮನ್ನು ಒಂದೇ ಸಮನೆ ಬೆರಗುಗೊಳಿಸುತ್ತಿರುವ ವೈಜ್ಞಾನಿಕತೆ—ಇವುಗಳಿಗೆಲ್ಲ ಯಾವುದು ಕಾರಣ?..... ಆತ್ಮಶಿಕ್ಷಣ! ಹೇಗೆ? ಮನುಷ್ಯನ ಅಂತರಂಗದಲ್ಲಿ ಮೂಲಭೂತವಾದ ಎರಡು ಪ್ರಬಲ ಅಂಶಗಳಿವೆ—ಕುತೂಹಲಪಡುವ ಪ್ರವೃತ್ತಿ ಹಾಗೂ ಆಲೋಚನೆ ಮಾಡುವ ಸಾಮರ್ಥ್ಯ. ಹೊರ ಪ್ರಪಂಚದಲ್ಲಿ ಹರಡಿಕೊಂಡಿರುವ ಪರಿಪರಿಯ ಪ್ರಾಕೃತಿಕ ಪರಿಸರಗಳು ಮನುಷ್ಯನ ಕುತೂಹಲ ಪ್ರವೃತ್ತಿಯನ್ನು ಕೆರಳಿಸುತ್ತಲೇ ಇರುತ್ತವೆ. ಪರಿಣಾಮವಾಗಿ ಅವನ ಮನದಲ್ಲಿ ಏನು? ಏಕೆ? ಹೇಗೆ? ಎಂಬ ಪ್ರಶ್ನೆಗಳು ಉದಿಸಲಾರಂಭಿಸುತ್ತವೆ. ಆಗ ಅವನು ಆಲೋಚಿಸತೊಡಗುತ್ತಾನೆ. ಶಾಲಾಕಾಲೇಜುಗಳಲ್ಲಿ ದೊರೆತ ಯತ್ಕಿಂಚಿತ್ ಶಿಕ್ಷಣದೊಂದಿಗೆ ಈಗ ಸ್ವತಂತ್ರವಾಗಿಯೇ ಆಲೋಚಿಸತೊಡಗುತ್ತಾನೆ. ಈ ಆಲೋಚನೆಯೊಂದಿಗೆ ಅವನ ಕುತೂಹಲ ತೀವ್ರವಾಗುತ್ತದೆ. ತೀವ್ರ ಕುತೂಹಲದ ಪರಿಣಾಮವಾಗಿ ಆಲೋಚನೆ ತೀಕ್ಷ್ಣವಾಗುತ್ತದೆ. ತೀಕ್ಷ್ಣವಾದ ಆಲೋಚನೆಯ ಫಲವಾಗಿ ಮನಸ್ಸು ಏಕಾಗ್ರವಾಗಿಬಿಡುತ್ತದೆ. ಯಾರ ಮನಸ್ಸು ಯಾವ ವಿಷಯದಲ್ಲಿ ಏಕಾಗ್ರಗೊಂಡಿದೆಯೋ ಅವನು ಆ ವಿಷಯದ ಕುರಿತ ಎಲ್ಲ ಮಾಹಿತಿಗಳನ್ನು ಪಡೆದುಕೊಳ್ಳುತ್ತಾನೆ. ಈ

ರೀತಿಯಾಗಿ ಪಡೆದ ಅಪಾರ ಮಾಹಿತಿಗಳ ಸಹಾಯದಿಂದ ನಾಗರಿಕತೆಯೂ ಬೆಳೆಯಿತು! ವೈಜ್ಞಾನಿಕತೆಯೂ ವರ್ಧಿಸಿತು!

### ಲೋಕಬಾಂಧವ — ಲೋಕಕಂಟಕ

ಶಿಕ್ಷಣವೆಂಬ ಈ ಶಬ್ದಕ್ಕೆ ಸಂಬಂಧಿಸಿದಂತೆ ಒಂದು ಮುಖ್ಯ ಅಂಶವನ್ನು ತಿಳಿದಿರಬೇಕಾಗುತ್ತದೆ. ಏನೆಂದರೆ "ಶಿಕ್ಷಣ"ವೆಂದಾಗ ನಾವು ಅವನ್ನು ಒಳ್ಳೆಯ ಅರ್ಥದಲ್ಲೇ ಗ್ರಹಿಸುವುದು ರೂಢಿ. ಆದರೆ ಒಳ್ಳೆಯ ಶಿಕ್ಷಣವಿರುವಂತೆ ಕೆಟ್ಟ ಶಿಕ್ಷಣವೂ ಇಲ್ಲವೆಂದಲ್ಲ! ವ್ಯಕ್ತಿಯೊಬ್ಬ ಕುಶಿಕ್ಷಿತನಾಗಿರುವುದೂ ಕಂಡುಬರುತ್ತಿಲ್ಲವೇ? ಬಹುಶಃ ಕುಶಿಕ್ಷಿತರು ಹೇರಳವಾಗಿಯೇ ಇರುವುದು ಕಂಡುಬರುತ್ತದೆ! ವ್ಯಕ್ತಿಗಳು ವಿದ್ಯಾವಂತರಾಗಿಯೂ ದುಷ್ಟಕಾರ್ಯಗಳಲ್ಲಿ ತೊಡಗಿದ್ದರೆ ಅವರು ಕುಶಿಕ್ಷಿತರೇ ಸರಿ. ಆದರೆ ಸದಾಚಾರ ನಿರತರಾಗಿ ಸತ್ಕಾರ್ಯಗಳಲ್ಲಿ ತೊಡಗಿದ್ದರೆ ಅವರು ಸುಶಿಕ್ಷಿತರು. ಇನ್ನು, ಸಮಾಜದಲ್ಲಿ ಅಶಿಕ್ಷಿತ ವರ್ಗವೂ ಒಂದಿದೆ. ಆದರೆ ಇವರು ಅಮಾಯಕರೇ ಹೊರತು ಕುಶಿಕ್ಷಿತರಂತೆ ಕುಹಕಿಗಳಲ್ಲ. ಹೀಗೆ, ಈ ಬಗೆಯಾಗಿ ವಿಶ್ಲೇಷಿಸಿ ನೋಡಿದಾಗ ತಮಗೆ ತಾವೇ ಶಿಕ್ಷಣ ಕೊಟ್ಟುಕೊಳ್ಳುವವರಲ್ಲಿ ಸಜ್ಜನರೂ ಇರಬಹುದು, ದುರ್ಜನರೂ ಇರಬಹುದು; ಲೋಕಬಂಧುಗಳೂ ಇರಬಹುದು, ಲೋಕಕಂಟಕರೂ ಇರಬಹುದು. ಅಚ್ಚರಿಯೆಂದರೆ, ವಿದ್ಯಾಸಂಸ್ಥೆಗಳಲ್ಲಿ ಎಲ್ಲರಿಗೂ ಸಮಾನವಾಗಿ ಶಿಕ್ಷಣ ದೊರಕಿದರೂ ಕಾಲಕ್ರಮದಲ್ಲಿ ಕೆಲವರು ಲೋಕಬಂಧುಗಳಾಗಿಯೂ ಕೆಲವರು ಲೋಕಕಂಟಕರಾಗಿಯೂ ಕಂಡುಬರುವುದುಂಟು. ಇದಕ್ಕೇನು ಕಾರಣವಿರಬಹುದು? ಇದಕ್ಕೆ ಕಾರಣ ಆತ್ಮಶಿಕ್ಷಣ! ಎಂದರೆ ಅವರವರಿಗೆ ಅವರವರೇ ಕೊಟ್ಟುಕೊಂಡ ಶಿಕ್ಷಣ! ಸಾತ್ವಿಕ ಸ್ವಭಾವದವರು ತಮ್ಮ ಹೃನ್ಮನಗಳನ್ನು ಉದಾತ್ತಗೊಳಿಸಿಕೊಂಡರು; ಪರಿಣಾಮವಾಗಿ ಲೋಕಬಂಧುಗಳಾಗಿ ನಿರ್ಮಾಣಗೊಂಡರು. ತಾಮಸಿಕ ಸ್ವಭಾವದವರು ತಮ್ಮ ಹೃನ್ಮನಗಳಲ್ಲಿ ದುಷ್ಟವಿಚಾರಗಳನ್ನೇ ತುಂಬಿದರು, ನೀಚ ಭಾವನೆಗಳನ್ನೇ ಬೆಳಸಿಕೊಂಡರು. ಪರಿಣಾಮವಾಗಿ ಲೋಕಕಂಟಕರಾದರು!

### ನಾವೇ ಅಲ್ಲವೇ?

ನಾವು ಶಾಲಾಕಾಲೇಜುಗಳಿಂದ ಎಷ್ಟೇ ಶಿಕ್ಷಣ ಪಡೆದಿದ್ದರೂ ನಮ್ಮ ವ್ಯಕ್ತಿತ್ವ ರೂಪುಗೊಳ್ಳುವುದು ಮಾತ್ರ ನಮಗೆ ನಾವೇ ಕೊಟ್ಟುಕೊಳ್ಳುವ ಶಿಕ್ಷಣದಿಂದ ಎಂದು ಹೇಳಿದರೆ ಹಲವರಿಗೆ ಇದನ್ನು ಒಮ್ಮೆಗೇ ಒಪ್ಪಿಕೊಳ್ಳಲು ಕಷ್ಟವೆನಿಸಬಹುದು. ಆದರೆ ಸ್ವಲ್ಪ ಶಾಂತವಾಗಿ ಆಲೋಚಿಸಿ ನೋಡಿದಾಗ ಸತ್ಯಾಂಶ ತಿಳಿದು ಬರುತ್ತದೆ. ಉದಾಹರಣೆಗೆ ಶಿಕ್ಷಕರು ಪಾಠ ಮಾಡಿದರೂ ಮನೆಗೆ ಬಂದು ಮನನ ಮಾಡದಿದ್ದರೆ ಕೇಳಿದ ಪಾಠ ಮನದಟ್ಟಾಗದು. ಗವಾಯಿಗಳೇ ಸಂಗೀತ ಹೇಳಿಕೊಟ್ಟರೂ ಮನೆಗೆ ಬಂದು ಹಾಡಿ-ಹಾಡಿ-ಹಾಡಿ, ರಾಗದ ಸ್ವರೂಪವನ್ನು ಕಂಠದ ಮೂಲಕ ಹೊಮ್ಮಿಸಬೇಕಾದರೆ ನಾವೇ ಶ್ರಮಿಸಬೇಕಾಗುತ್ತದಲ್ಲವೇ? ವ್ಯಾಯಾಮಪಟುಗಳು ಅಂಗಸಾಧನೆಯ ಕ್ರಮವನ್ನು ಎಷ್ಟೇ ತೋರಿಸಿಕೊಟ್ಟರೂ ನಮ್ಮ ಅಂಗಾಂಗಗಳನ್ನು ಬಗ್ಗಿಸಿ-ತಗ್ಗಿಸಿ, ತಿರಿಚಿ-ಮುರುಚಿ, ದಂಡಿಸಿ-ದಣಿಸಿ, ಸದೃಢಗೊಳಿಸಿಕೊಳ್ಳಬೇಕಾದವರು ನಾವೇ ಅಲ್ಲವೇ? ಶ್ರೇಷ್ಠ ಸದ್ಗುಣಗಳ ಕುರಿತಾಗಿ ಎಷ್ಟೇ ಕೇಳಿದರೂ ಎಷ್ಟೇ ಓದಿದರೂ ಸಹಮಾನವರೊಂದಿಗೆ ಒಡನಾಡುವ ವೇಳೆಯಲ್ಲಿ ಆ ಸದ್ಗುಣಗಳು ನಮ್ಮ ಮೂಲಕ ಒಡಮೂಡುವಂತೆ ಮಾಡಬೇಕಾದವರು ನಾವೇ ಅಲ್ಲವೇ? ಗುರುಗಳು ಆತ್ಮವಿದ್ಯೆಯ ಕುರಿತಾಗಿ, ಸಾಕ್ಷಾತ್ಕಾರದ ಸಂಬಂಧವಾಗಿ ಎಷ್ಟೇ ಬೋಧನೆ ಮಾಡಿದರೂ ಉಪದೇಶ ನೀಡಿದರೂ ತನು-ಮನಗಳನ್ನು ಸಂಯಮದಲ್ಲಿಟ್ಟುಕೊಂಡು ಯೋಗನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತ ಏಕಾಗ್ರತೆಯಿಂದ ಧ್ಯಾನಾಭ್ಯಾಸ ಮಾಡಬೇಕಾದವರು ನಾವೇ ಅಲ್ಲವೇ?

> **ಆಚಾರ್ಯಾತ್ ಪಾದಮೇಕಂ ಸ್ಯಾತ್ ಪಾದಂ ಸಬ್ರಹ್ಮಚಾರಿಭಿಃ ।**
> **ಪಾದಂ ತು ಮೇಧಯಾ ಜ್ಞೇಯಂ ಶೇಷಂ ಕಾಲೇನ ಪಚ್ಯತೇ॥**
>
> ಕಾಲುಭಾಗ ಜ್ಞಾನವು ಗುರುವಿನಿಂದ ಲಭಿಸುತ್ತದೆ, ಇನ್ನು ಕಾಲು ಭಾಗ ಸಹವಿದ್ಯಾರ್ಥಿಗಳೊಡನೆ ಚರ್ಚೆಯಿಂದ ಲಭಿಸುತ್ತದೆ, ಮತ್ತೆ ಕಾಲುಭಾಗ ತನ್ನ ಬುದ್ಧಿಶಕ್ತಿ ಮತ್ತು ವಿಚಾರಶಕ್ತಿಯ ಮೂಲಕ ದೊರೆಯುತ್ತದೆ, ಉಳಿದ ಕಾಲುಭಾಗ ಕಾಲಕ್ರಮೇಣ ಸ್ವಂತ ಅನುಭವದ ಮೂಲಕ ಲಭಿಸುತ್ತದೆ.

ಒಟ್ಟಿನಲ್ಲಿ ಆತ್ಮಶಿಕ್ಷಣದ ಮೂಲಕ ಅಂತರಂಗವನ್ನು ಸಂಸ್ಕರಣಗೊಳಿಸಿಕೊಳ್ಳುತ್ತ, ಕೊನೆಗೆ ಆತ್ಮಾನಂದವನ್ನು ಅನುಭವಿಸುವವರು ನಾವೇ ಅಲ್ಲವೇ?

### ಆತ್ಮಶಿಕ್ಷಣದಲ್ಲಿ ವಿವೇಕದೃಷ್ಟಿಯ ಪಾತ್ರ

ಯಾವುದು ಹಿತಕರ, ಯಾವುದು ಅಹಿತಕರ, ಯಾವುದು ಸಹಾಯಕರ, ಯಾವುದು ಅಸಹಾಯಕರ, ಯಾವುದು ಶಾಶ್ವತ, ಯಾವುದು ಅಶಾಶ್ವತ ಎಂಬುದನ್ನು ವಿವೇಚಿಸಿ ತಿಳಿಯಬಲ್ಲ ಸಾಮರ್ಥ್ಯವೇ ವಿವೇಕ. ಯಾರಲ್ಲಿ ಈ ಸಾಮರ್ಥ್ಯ ಬೆಳೆದಿದೆಯೋ ಅವನಲ್ಲಿ ವಿವೇಕದೃಷ್ಟಿ ತೆರೆದಿದೆಯೆಂದರ್ಥ. ಯಾರಲ್ಲಿ ವಿವೇಕ ದೃಷ್ಟಿ ತೆರೆದಿಲ್ಲವೋ ಅವನು ಅವಿವೇಕಿ, ಯಾರಲ್ಲಿ ಅದು ತೆರೆದಿದೆಯೋ ಅವನು ವಿವೇಕಿ.

ಅವಿವೇಕಿಗೂ ವಿವೇಕಿಗೂ ಅದೆಷ್ಟು ವ್ಯತ್ಯಾಸ! ಅವಿವೇಕಿಯು ತನಗೆ ತಾನೇ ಅಪಾಯ ತಂದುಕೊಳ್ಳುತ್ತಾನೆ. ವಿವೇಕಿಯು ತನ ಗೊದಗಿದ ಎಲ್ಲ ಅಪಾಯಗಳಿಂದಲೂ ಉಪಾಯವಾಗಿ ತಪ್ಪಿಸಿಕೊಳ್ಳುತ್ತಾನೆ! ಜೀವನದ ಯಶಸ್ಸಿಗೆ ಎಂತೆಂಥ ಅವಕಾಶಗಳು ಕಣ್ಮುಂದೆಯೇ ತೆರೆದಿದ್ದರೂ ಅವಿವೇಕಿ ಅವುಗಳನ್ನು ಕಾಣಲಾರ, ಸದುಪಯೋಗಪಡಿಸಿಕೊಳ್ಳಲಾರ. ಆದರೆ, ವಿವೇಕಿಯಾದರೋ ತನ್ನ ಯಶಸ್ಸಿನ ಮಾರ್ಗವನ್ನು ತಾನೇ ತೆರೆದುಕೊಳ್ಳಬಲ್ಲ. ತೆರೆದಿರುವ ತನ್ನ ವಿವೇಕ ದೃಷ್ಟಿಯಿಂದ ತನಗೆ ಆವಶ್ಯಕವಿರುವ ಅವಕಾಶಗಳನ್ನು ತಾನೇ ಸೃಷ್ಟಿಸಿಕೊಳ್ಳಬಲ್ಲ!

**ವಿವೇಕವೆಂಬ ದೀಪವನ್ನು ಹಿಡಿದುಕೊಂಡು ವೈರಾಗ್ಯದ ಹಾದಿಯಲ್ಲಿ ನಾವು ನಡೆಯಬೇಕು.**

ಈ ವಿವೇಕದೃಷ್ಟಿಯನ್ನು ತೆರೆಯುವುದು ಹೇಗೆ? ಕಣ್ಣಿಲ್ಲದವನು ಕಣ್ಣುಳ್ಳವನ ಸಹಾಯದಿಂದ ಮಾರ್ಗ ತಿಳಿಯುವಂತೆ ವಿವೇಕಿಗಳ ಸಹವಾಸದಿಂದ ವಿವೇಚನಾ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು. ಅಲ್ಲದೆ, ಜೀವನದಲ್ಲಿ ನಮಗೊದಗಿದ ಒಂದೊಂದು ಸಂಕಟದ ಮೇಲೂ ಚಿಂತನೆ ನಡೆಸಿ ಸಂಕಟದ ಕಾರಣವನ್ನು ಕಂಡುಹುಡುಕಲು ಯತ್ನಿಸಬೇಕು. ಹೀಗೆ ಆಲೋಚಿಸಿನೋಡುವ ಅಭ್ಯಾಸ ಮಾಡಿಕೊಂಡರೆ ಒಂದೊಂದು ಸಂಕಟವೂ ಒಂದೊಂದು ಅಮೂಲ್ಯ ಪಾಠವನ್ನು ಕಲಿಸ ಬಲ್ಲದು, ನಮ್ಮ ವಿವೇಕದೃಷ್ಟಿಯನ್ನು ತೆರೆಸಬಲ್ಲುದು!

ಸಂಕಟಗಳು ಎದುರಾದಾಗ ವಿವೇಚಿಸಿ ನೋಡುವಂತೆ ಸಂಪತ್ತು ಬಂದಾಗಲೂ ವಿವೇಚಿಸಿ ನೋಡುವ ಆವಶ್ಯಕತೆ ಇದೆ! ಏಕೆಂದರೆ ಆಪತ್ತು ಬಂದಾಗ ಸಹಜವಾಗಿಯೇ ನಮ್ಮ ಮನಸ್ಸು ಎಚ್ಚರವಾಗಿರುತ್ತದೆ. ಆದರೆ ಸಂಪತ್ತು ಸೇರಿದಾಗ ಮುದದಿಂದಲೋ ಅಥವಾ ಮದದಿಂದಲೋ ಮನುಷ್ಯ ಎಚ್ಚರಗೇಡಿಯಾಗುವ ಸಂಭವವೇ ಹೆಚ್ಚು! ಆಗ ಅವನ ಸಂಪತ್ತೇ ಅವನನ್ನು ಆಪತ್ತಿಗೆ ಗುರಿಯಾಗಿಸುವುದು ಖಂಡಿತ.

ಇನ್ನೊಂದು ಬಲು ಸೂಕ್ಷ್ಮ ವಿಚಾರವಿದೆ ಇಲ್ಲಿ. ಏನೆಂದರೆ ಸದ್ಗುಣಗಳನ್ನು ಬೆಳಿಸಿಕೊಳ್ಳಬೇಕೆಂಬ ವಿಷಯದಲ್ಲಿ ಎರಡು ಮಾತಿಲ್ಲವೆಂಬುದು ನಿಜವಾದರೂ ಅಹಿಂಸೆ-ಸಹನೆಯೇ ಮೊದಲಾದ ಕೆಲವು ಗುಣಗಳನ್ನು ಅಭ್ಯಾಸ ಮಾಡುವ ಸಂದರ್ಭದಲ್ಲಿ ಸಾಕಷ್ಟು ಎಚ್ಚರಿಕೆ ವಹಿಸಬೇಕಾದ ಆವಶ್ಯಕತೆಯಿದೆ. ಉದಾಹರಣೆಗೆ ಅತಿಯಾದ ಸಹನೆ ತೋರುವವರನ್ನು ಮೊದ್ದುಗಳೆಂದು ತಿಳಿಯುತ್ತಾರೆ, ಚೆನ್ನಾಗಿ ದುರುಪಯೋಗಪಡಿಸಿಕೊಳ್ಳುತ್ತಾರೆ ಎಂಬುದು ಹೊಸ ಅನುಭವವೇನಲ್ಲವಲ್ಲ! ಆದ್ದರಿಂದ ತಮಗೆ ತಾವೇ ಶಿಕ್ಷಣ ಕೊಟ್ಟುಕೊಳ್ಳುತ್ತ ಸದ್ಗುಣಗಳನ್ನು ಬೆಳೆಸಿಕೊಳ್ಳುವಾಗ ಜೊತೆ ಜೊತೆಯಲ್ಲೇ ನಾವು ಇತರರಿಂದ ಮೋಸಹೋಗದಿರುವಂತೆಯೂ ಶಿಕ್ಷಣ ಕೊಟ್ಟುಕೊಳ್ಳಬೇಕಾಗುತ್ತದೆ!

ಒಂದು ಅತ್ಯಂತ ಆಶ್ಚರ್ಯಕರ ಅಂಶವೊಂದನ್ನು ಇಲ್ಲಿ ಹೇಳಲೇಬೇಕು. ಏನೆಂದರೆ, ಮೇಲೆ ಹೇಳಿದಂತೆ ಇತರರಿಂದ ಮೋಸಹೋಗುವ ಮಾತಂತಿರಲಿ; ನಮ್ಮಿಂದ ನಾವೇ ಮೋಸಹೋಗುವ ಕಟುಸತ್ಯದೆಡೆಗೆ ಕಣ್ತೆರೆಯಬೇಕಾದ ತುರ್ತುಪರಿಸ್ಥಿತಿಯೊಂದು ನಮ್ಮ ಕಣ್ಮುಂದಿದೆ! ಕರ್ತವ್ಯದ ಹೆಸರಿನಲ್ಲಿ ಎಷ್ಟೋ ವ್ಯಾಮೋಹಗಳು ನಮ್ಮ ಮೇಲೆ ಪ್ರಭುತ್ವ ಸಾಧಿಸುತ್ತವೆ. ನಿಜವಾಗಿಯೂ ವ್ಯಾಮೋಹವೇ ನಮ್ಮ ಕ್ರಿಯೆಗಳನ್ನು ಪ್ರಚೋದಿಸುತ್ತಿದ್ದರೂ ಅವು ಕರ್ತವ್ಯವೆಂದು ಸಮರ್ಥಿಸಿಕೊಳ್ಳುತ್ತ ನಮ್ಮನ್ನು ನಾವೇ ವಂಚಿಸಿಕೊಳ್ಳುತ್ತೇವೆ. ಈ ಕ್ರಿಯೆ ನಮಗೇ ತಿಳಿಯದಂತೆ ನಡೆಯುತ್ತಿರುತ್ತದೆ. ಹೀಗೆ ಕೀರ್ತಿ ಮತ್ತು ಸಾಮಾಜಿಕ ಪ್ರತಿಷ್ಠೆಯ ಆಸೆ ನಮ್ಮನ್ನು ಎಷ್ಟೋ ಸಮಾಜಸೇವಾ ಕಾರ್ಯಗಳಲ್ಲಿ ಮತ್ತು ಧರ್ಮಪ್ರಚಾರ ಕಾರ್ಯದಲ್ಲಿ ತೊಡಗಿಸುತ್ತವೆ. ನಾವು ಕೀರ್ತಿಯನ್ನು ಗಳಿಸುವುದಕ್ಕೆ ಶಂಕರಾಚಾರ್ಯ, ಬುದ್ಧ, ಸ್ವಾಮಿ ವಿವೇಕಾನಂದರಂತಹ ಮಹಾನ್ ವ್ಯಕ್ತಿಗಳ ಸಂದೇಶದ ಪ್ರಚಾರಕಾರ್ಯದಲ್ಲಿ ಅತ್ಯುತ್ಸಾಹದಿಂದ ತೊಡಗುತ್ತೇವೆ. ನಮ್ಮ ಕಾರ್ಯಗಳ ಹಿಂದಿರುವ ನಿಜವಾದ ಉದ್ದೇಶವನ್ನು ಅರ್ಥ ಮಾಡಿಕೊಳ್ಳುವುದು ಬಹಳ ಕಷ್ಟ. ಅರ್ಥವಾದರೂ ಸ್ವಾರ್ಥೋದ್ದೇಶವನ್ನು ತ್ಯಜಿಸಲು ಮನಸ್ಸು ಒಪ್ಪುವುದೇ ಇಲ್ಲ. ಆದ್ದರಿಂದ ವಿವೇಕದ ಜೊತೆ ವೈರಾಗ್ಯವೂ ಇರಬೇಕು. ವಿವೇಕವೆಂಬ ದೀಪವನ್ನು ಹಿಡಿದುಕೊಂಡು ವೈರಾಗ್ಯದ ಹಾದಿಯಲ್ಲಿ ನಾವು ನಡೆಯಬೇಕು. ಇದೇ ಆತ್ಮಶಿಕ್ಷಣ. ಆಧ್ಯಾತ್ಮಿಕ ಜೀವನ ನಡೆಸುವವರು ತಮಗೆ ತಾವೇ ಕೊಟ್ಟುಕೊಳ್ಳುವ ಆತ್ಮಶಿಕ್ಷಣದ ವಿಷಯದಲ್ಲಿ ಅತ್ಯಂತ ನಿರ್ದಾಕ್ಷಿಣ್ಯವಾಗಿರಬೇಕಾದ ಅನಿವಾರ್ಯತೆಯಿದೆ! ಕಠೋಪನಿಷತ್ತು ಘೋಷಿಸಿರುವ ಕಠೋರ ಸತ್ಯ ಇದು—ಆಧ್ಯಾತ್ಮಿಕ ಸಾಧನೆಯೆಂದರೆ ಹರಿತವಾದ ಖಡ್ಗದ ಅಲುಗಿನ ಮೇಲೆ ನಡೆಯುವಷ್ಟು ಕಠಿಣವಾದ ಕಾರ್ಯ! ಎಂತಹ ಗಂಭೀರವಾದ ಸತ್ಯ ಇದು!!

ಆದ್ದರಿಂದ ಆತ್ಮಶಿಕ್ಷಣದ ಮೂಲಕ ವಿವೇಕ ದೃಷ್ಟಿಯನ್ನು ತೆರೆದುಕೊಳ್ಳಬೇಕು; ಮತ್ತು ವಿವೇಕದೃಷ್ಟಿಯ ಮೂಲಕ ಆತ್ಮಶಿಕ್ಷಣದ ಕಾರ್ಯ ನಡೆಯಬೇಕು! ಆದರೆ ವಿವೇಕಪ್ರಜ್ಞೆ ಜಾಗ್ರತವಾಗದೆ ಆತ್ಮಶಿಕ್ಷಣದ ಕಾರ್ಯ ಆಗುವಂತಿಲ್ಲ; ಆತ್ಮಶಿಕ್ಷಣದ ಕಾರ್ಯ ನಡೆಯದೆ ವಿವೇಕಪ್ರಜ್ಞೆ ಜಾಗ್ರತಗೊಳ್ಳುವಂತಿಲ್ಲ! ಇದಕ್ಕೆ ಪರಿಹಾರೋಪಾಯವೇನು? ಪರಿಹಾರ ಇದು: ಮೊದಮೊದಲು ಯಥಾಶಕ್ತಿಯಾಗಿ ಪ್ರಾಮಾಣಿಕ ಭಾವದಿಂದ ಆತ್ಮಶಿಕ್ಷಣ ಕೊಟ್ಟುಕೊಳ್ಳುತ್ತ ವಿವೇಕ ದೃಷ್ಟಿಯನ್ನು ಪಡೆದುಕೊಳ್ಳುವುದು. ಬಳಿಕ ಈ ಪ್ರಖರ ವಿವೇಕದೃಷ್ಟಿಯ ಸಹಾಯದಿಂದ ಆತ್ಮಶಿಕ್ಷಣವನ್ನು ತೀವ್ರಗೊಳಿಸುತ್ತ ಪರಿಪೂರ್ಣತೆಯ ಕಡೆಗೆ ಪಯಣಿಸುವುದು!

**ಉಪಯೋಗವಿಲ್ಲದ್ದು !**

ಪಂಡಿತರೊಬ್ಬರು ರಾಣಿ ಅಹಲ್ಯಾಬಾಯಿ ಹೋಳ್ಕರ್ ಅವರ ಸದ್ಗುಣಗಳನ್ನು ಹೊಗಳಿ ಸಂಸ್ಕೃತದಲ್ಲಿ ಗ್ರಂಥವೊಂದನ್ನು ಬರೆದರು. ಒಂದು ದಿನ ಅವರು ರಾಣಿಯವರ ಆಸ್ಥಾನಕ್ಕೆ ಬಂದು ನೆರೆದಿರುವವರೆದುರು ಆ ಗ್ರಂಥವನ್ನು ಓದಿದರು. ರಾಣಿಯವರು ಅದನ್ನು ಏಕಾಗ್ರತೆಯಿಂದ ಕೇಳಿದರೂ ಅದೇಕೋ ಅವರ ಕಣ್ಣುಗಳಿಂದ ಕಂಬನಿಯ ಧಾರೆ ಹರಿಯಿತು. ಓದು ಮುಗಿದ ನಂತರ ಪಂಡಿತರಿಗೆ ಕರುಣಾಪೂರಿತ ಸ್ವರದಲ್ಲಿ ಹೇಳಿದರು: "ಮಾನ್ಯರೇ! ನಿಮಗೆ ನಾನಿದಕ್ಕೆಲ್ಲಾ ಅರ್ಹಳು ಎಂದೆನಿಸುತ್ತದೆಯೆ? ನಾನೋರ್ವ ಅಸಹಾಯಕ ಜಂತು. ನಿಮ್ಮ ಕವಿತಾ ಶಕ್ತಿಯನ್ನು ಶ್ರೀಭಗವಂತನ ಅಪರಿಮಿತ ಗುಣಗಾನಮಾಡಲು ಉಪಯೋಗಿಸಿದ್ದರೆ ಅದೆಷ್ಟು ಅದ್ಭುತವಾಗಿರುತ್ತಿತ್ತು!" ಹೀಗೆ ಹೇಳಿದರೂ ರಾಣಿಯವರು ನಂತರ ಪಂಡಿತರಿಗೆ ಆದ್ದೂರಿಯಾಗಿಯೇ ಸನ್ಮಾನ ಮಾಡಿದರು. ಅವರು ಹೋದನಂತರ, ಆ ಗ್ರಂಥವನ್ನು ನರ್ಮದಾ ನದಿಯಲ್ಲಿ ಬಿಸಾಡಿದರು. (ಸಂಗ್ರಹ: ಎಸ್ ಗೋಪೀನಾಥ.)